ನಿ- 72
ಕ್ರ - 118 147ನೇ ೬ಧಿವೇಶನ
ಕಂ/ಇ/೬೦

<u>**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪಿ.ಎಂ ಮುನಿರಾಜುಗೌಡ ಇವರು ನಿಯಮ 72ರ ಅಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ**</u>

**: ವಿಷಯ :**

**ಕರ್ನಾಟಕ ರಾಜ್ಯ ಪೊಲೀಸ್ ಶಿಸ್ತು ನಡವಳಿಕೆ ನಿಯಮಗಳ ಪ್ರಸ್ತುತ 2022ರ ತಿದ್ದುಪಡಿ ನಿಯಮಕ್ಕೆ ಹೆಚ್ಚುವರಿಯಾಗಿ 4ಎ, 4ಬಿ, 4ಸಿ ಉಪ ನಿಯಮಗಳನ್ನು ಸೇರ್ಪಡೆಗೊಳಿಸಿ ಕರಡು ಪ್ರಕಟಿಸಿದೆ. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿದ್ದರೂ ಕರಡನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸಿದ ಅಧಿಕಾರಿಗಳ ವಿರುದ್ಧ ಅಗತ್ಯ ಕ್ರಮಕೈಗೊಳ್ಳಲು ಆಗ್ರಹಿಸುತ್ತೇನೆ ಮತ್ತು ಈ ತಿದ್ದುಪಡಿ ನಿಯಮವು ಸ್ವಾಭಾವಿಕ ನೈಸರ್ಗಿಕ ಸಂವಿಧಾನಿಕ ಆಶಯ ಹಾಗೂ ನ್ಯಾಯತತ್ವಗಳಿಗೆ ವಿರುದ್ಧವಾಗಿದೆ. ಇಲಾಖೆಯ ಪಿ.ಎಸ್.ಐ, ಎ.ಎಸ್.ಐ, ಹೆಚ್.ಸಿ ಸೇರಿದಂತೆ ಇತರೆ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದ ಮೇಲೆ ಭ್ರಷ್ಟಾಚಾರ, ಅಶಿಸ್ತು ಹಾಗೂ ಇನ್ನಿತರ ಆರೋಪ ಕೇಳಿಬಂದಾಗ ಸಂಬಂಧಪಟ್ಟ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಶಿಸ್ತು ಪ್ರಾಧಿಕಾರಗಳು, ವಾಗ್ದಂಡನೆ, ವಾರ್ಷಿಕ ವೇತನ ಬಡ್ತಿ ತಡೆಹಿಡಿಯುವುದು, ಹುದ್ದೆ ಮುಂಬಡ್ತಿ ತಡೆಹಿಡಿಯುವುದು ಹಾಗೂ ಆರ್ಥಿಕ ನಷ್ಟ ವಸೂಲಿ ಮುಂತಾದ ದಂಡನೆ ವಿಧಿಸಲಾಗುತ್ತದೆ. ಪ್ರಸ್ತುತ ನಿಯಮದಲ್ಲಿ ಈ ದಂಡನೆಗಳ ಪ್ರಶ್ನಿಸಿ ಮೆಲ್ಮನವಿ ಸಲ್ಲಿಸಲು ಅಧಿಕಾರಿ ಮತ್ತು ಸಿಬ್ಬಂದಿಗೆ ಅವಕಾಶವಿದೆ. ಆದರೆ, ಪ್ರಸ್ತುತ 2022ರ ತಿದ್ದುಪಡಿ ನಿಯಮಗಳ ಜಾರಿಯಿಂದ ಮೆಲ್ಮನವಿ ಸಲ್ಲಿಸಲು ಅವಕಾಶ ನಿರಾಕರಿಸಿದಂತಾಗುತ್ತದೆ. ಐ.ಪಿ.ಎಸ್ ಹಂತದ ಅಧಿಕಾರಿಗಳಿಗೆ ಅವರ ಮೇಲೆ ದಂಡನೆ, ಶಿಕ್ಷೆ ಆದರೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ಮೂಲಭೂತ ಅಂಶವನ್ನು ಪರಿಗಣಿಸಿ ಈ ತಿದ್ದುಪಡಿಯನ್ನು ಗೃಹ ಇಲಾಖೆಯು ಪುನರ್ ಪರಿಶೀಲಿಸುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.**

**: ಉತ್ತರ :**

ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ಕ್ಕೆ ತಿದ್ದುಪಡಿ ಮಾಡುವ ಕುರಿತು ಮಹಾನಿರ್ದೇಶಕರು ಹಾಗೂ ಆರಕ್ಷಕ ಮಹಾನಿರೀಕ್ಷಕರು ಕರಡು ನಿಯಮಗಳನ್ನು ರಚಿಸಿ ಪ್ರಸ್ತಾಪಿಸಿರುತ್ತಾರೆ. ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಇಲಾಖೆಯು ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) (ತಿದ್ದುಪಡಿ) ನಿಯಮಗಳು, 2022ರ ಕರಡು ಪ್ರತಿಯನ್ನು ಪರಿಶೋಧಿಸಿ ಒದಗಿಸಿರುತ್ತದೆ. ಸದರಿ ಕರಡು ನಿಯಮಗಳನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 176 ಮೊಸಿಅ 2017, ದಿನಾಂಕ:07.09.20222ನ್ನು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆ–441ರಲ್ಲಿ ದಿನಾಂಕ:07.09.2022ರಲ್ಲಿ ಪ್ರಕಟಿಸಿ, ಬಾಧಿತರಾದ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳಿಂದ ಆಕ್ಷೇಪಣೆ / ಸಲಹೆಗಳನ್ನು ಸಲ್ಲಿಸಲು ರಾಜ್ಯ ಪತ್ರದಲ್ಲಿ ಪ್ರಕಟವಾದ 15 ದಿನಗಳ ಕಾಲಾವಕಾಶ ಕಲ್ಪಿಸಲಾಗಿರುತ್ತದೆ. ಈ ಕುರಿತು ಆಕ್ಷೇಪಣೆ ಸಲ್ಲಿಸಲು ದಿನಾಂಕ:22.09.2022 ಅಂತಿಮ ದಿನಾಂಕವಾಗಿರುತ್ತದೆ. ಆಕ್ಷೇಪಣೆ / ಸಲಹೆಗಳನ್ನು ಪರಿಗಣಿಸಿದ ಬಳಿಕವಷ್ಟೇ ಅಂತಿಮ ನಿಯಮಗಳನ್ನು ಪ್ರಕಟಿಸಲಾಗುತ್ತದೆ.

ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) (ತಿದ್ದುಪಡಿ) ನಿಯಮಗಳು, 2022ರ ಕರಡು ನಿಯಮಗಳಿಗೆ ಈಗಾಗಲೇ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳಿಂದ ಆಕ್ಷೇಪಣೆ / ಸಲಹೆಗಳನ್ನು ಸ್ವೀಕೃತವಾಗಿರುತ್ತದೆ. ಪ್ರಸ್ತುತ ಚರ್ಚೆಯಲ್ಲಿರುವ ವಿಷಯವನ್ನು ಪರಿಶೀಲಿಸಲಾಗಿ ಕರಡು ನಿಯಮಗಳ 4C Appeals and revision ಭಾಗದಲ್ಲಿ Provided that, no appeal shall lie in case the penalties

imposed are those specified in sub-clauses (ii) and (iii) of **clause (a)** of sub-rule (1) of rule 4A. ಎಂದು ನಮೂದಿಸಲಾಗಿದ್ದು, ಕರಡು ನಿಯಮಗಳನ್ನು ಪರಿಶೋಧಿಸುವ ಸಂದರ್ಭದಲ್ಲಿ ಬೆರಳಚ್ಚು ದೋಷದಿಂದಾಗಿ ಈ ಭಾಗದಲ್ಲಿ **clause (c)** ಎಂಬ ಬದಲು **clause (a)** ಎಂದು ನಮೂದಾಗಿರುತ್ತದೆ. ಪ್ರಸ್ತುತ ಕರಡು ನಿಯಮಗಳಲ್ಲಿನ ಈ ಅಂಶವನ್ನು ಸರಿಪಡಿಸಿ ಅಂತಿಮ ನಿಯಮಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಹೆಚ್‌ಡಿ/123/ಪಿಪಿಎ/2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು